ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA - CHM ಫೋನ್ : 114

1ನೇ ವರ್ಷ 3ನೇ ಸಂಚಿಕೆ ಕೊಪ್ಪ 3-9-1989 ಭಾನುವಾರ ಬೆಲೆ 50 ಪೈಸೆ

ಕೊಪ್ಪ ಪುರಭವನದ ಟಿ. ವಿ. ಕಳವು

ಕೊಪ್ಪ : ಇಲ್ಲಿನ ಪುರಭವನದಲ್ಲಿಡಲಾಗಿದ್ದ, ಸುಮಾರು 14 ಸಾವಿರ ರೂ. ಬೆಲೆಯ 'ಒನಿಡಾ' ಟಿ.ವಿ. ಆ. 31ರ ರಾತ್ರಿ ಕಳುವಾಗಿದೆ. ಕೊಪ್ಪ ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಕೆಸವೆಯಲ್ಲಿ ಸಂಶಯಾಸ್ಪದ ವ್ಯಕ್ತಿ ಬಂಧನ

ತಾನು ಕೆ. ಇ. ಬಿ. ಮೀಟರ್ ರೀಡರ್ ಎಂದು ಹೇಳಿಕೊಂಡು ಕೆಸವೆಯಲ್ಲಿ ಮೂರ್ನಾಲ್ಕು ದಿನಗಳಿಂದ ಓಡಾಡುತ್ತಿದ್ದ ಶಾಂತಕುಮಾರ್ ಎಂಬ ಯುವಕನನ್ನು ಗ್ರಾಮಸ್ಥರು ಸಂಶಯಿಸಿ, ಕೆ. ವಿ. ಮಂಡಳಿಗೆ ತಿಳಿಸಿದಾಗ, ಪೋಲೀಸರು ಬಾಳೆಹೊನ್ನೂರು ಸೆಕ್ಷನ್ ಇಂಜಿನಿಯರ್ ದುಗ್ಗಪ್ಪಗೌಡರೊಂದಿಗೆ ಸ್ಥಳಕ್ಕೆ ಧಾವಿಸಿ ಗ್ರಾಮಸ್ಥರು ಉಪಾಯವಾಗಿ ಹಿಡಿದಿಟ್ಟುಕೊಂಡಿದ್ದ ಆತನನ್ನು ಬಂಧಿಸಿದರು.

ಕಡೂರು ತಾ॥ ಗಿರಿಯಾಪುರದವನೆಂದು ಹೇಳಿಕೊಂಡಿರುವ ಈತನನ್ನು ನ್ಯಾಯಾಲಯಕ್ಕೆ ಹಾಜರ್ಪಡಿಸಲಾಯಿತು.

ಕ್ಷೇತ್ರದಲ್ಲಿ ಬಂದ್ ಭಾಗಶಃ ಯಶಸ್ವಿ

ಕೊಪ್ಪ : ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಮೂರೂ ತಾಲೂಕುಗಳಲ್ಲಿ ಆ. 30ರ ಭಾರತ ಬಂದ್ ಕೇವಲ ಭಾಗಶಃ ಮಾತ್ರ ನಡೆಯಿತು.

ಶೃಂಗೇರಿಯಲ್ಲಿ ಜನತಾ ದಳ, ಸಿಪಿಐ, ಬಿಜೆಪಿ ಕಾರ್ಯಕರ್ತರು ಬಂದ್ ಬೆಂಬಲಿಸುವಂತೆ ಪ್ರತಿ ಅಂಗಡಿ/ಮನೆಗಳಿಗೆ ಹೋಗಿ ಮನವಿ ಮಾಡಿದರೆ ಕೆ. ಎ. ರಾಮಪ್ಪಯ್ಯ, ಕೆ. ಆರ್. ಅಣ್ಣಯ್ಯ ಹೆಗ್ಗಡೆ ಮತ್ತಿತರರು ಬಂದ್ ಬೆಂಬಲಿಸದಂತೆ ಕೋರುತ್ತ ಸುತ್ತಾಡಿದರು. ಆದರೂ ಪೇಟೆ ಬಹುತೇಕ ಬಂದ್ ಆಗಿತ್ತು.

ಬಂದ್ ಪರ ಇದ್ದವರು ಮೆರವಣಿಗೆ ಹೊರಡಿಸುವುದಕ್ಕೆ ಪೋಲೀಸರು ತಡೆಯೊಡ್ಡಿದಾಗ, ಯಾವುದೇ ನಿಷೇಧಾಜ್ಞೆ ಇಲ್ಲದ್ದರಿಂದ ಪಟ್ಟು ಹಿಡಿದು 60–70 ಜನ ಕಾರ್ಯಕರ್ತರು ಮೆರವಣಿಗೆ ನಡೆಸಿದರು. ಅಹಿತಕರ ಘಟನೆಗಳೇನೂ ನಡೆಯಲಿಲ್ಲ.

ಕೊಪ್ಪದಲ್ಲಿ ಸಿಪಿಐ, ಜನತಾ ದಳದ ಸುಮಾರು 200 ಜನರು ಪುರಭವನದಲ್ಲಿ ಗೋವಿಂದಗೌಡರ ಅಧ್ಯಕ್ಷತೆಯಲ್ಲಿ ಖಂಡನಾ ಸಭೆ ನಡೆಸಿದರು. ಆದರೆ ಮೆರವಣಿಗೆ ನಡೆಸಬೇಕೆಂಬ ಕಾರ್ಯಕರ್ತರ ತೀವ್ರ ಒತ್ತಾಯಕ್ಕೆ ಗೋವಿಂದಗೌಡರು, ಮಂಜುನಾಥ ಶೆಟ್ಟಿ ಮುಂತಾದ ನಾಯಕರು ತಣ್ಣೀರೆರಚಿದ ಬಗ್ಗೆ ಕಾರ್ಯಕರ್ತರು ತೀವ್ರ ಅಸಮಾಧಾನಗೊಂಡಿದ್ದು ಕಂಡು ಬಂತು.

ಪೇಟೆಯ ಬಹುತೇಕ ಅಂಗಡಿಗಳು ಮುಚ್ಚಿದ್ದರೂ ಒಂದು–ಎರಡು ಬಾಗಿಲು ತೆಗೆದಿಟ್ಟುಕೊಂಡು ವ್ಯವಹಾರ ನಡೆಸಿದರು. ಬಸ್ಸು-ರಿಕ್ಷಾ ಓಡಾಟ ಮಾಮೂಲಾಗಿತ್ತಾದರೂ ಬಂದ್ ನಿರೀಕ್ಷೆಯಲ್ಲಿ ಗ್ರಾಮೀಣ ಜನರು ಹೆಚ್ಚಾಗಿ ಬಾರದ್ದರಿಂದ ವಹಿವಾಟೆಲ್ಲ ಸ್ತಬ್ಧವಾದಂತಿತ್ತು.

ನ. ರಾ. ಪುರದಲ್ಲಿ ಮೆರವಣಿಗೆ ನಡೆಸುವ ಪಟ್ಟು ಹಿಡಿದ ಸಿಪಿಐನ 30–35 ಜನರನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಲಾಯಿತು. "ರಾಜ್ಯ ಅಥವಾ ಜಿಲ್ಲಾ ನಾಯಕತ್ವದಿಂದ ಸಮರ್ಪಕ ಮಾರ್ಗದರ್ಶನ ಇರದಿದ್ದರಿಂದ" ಜನತಾ ದಳ ಬಂದ್ ಬಗ್ಗೆ ಆಸಕ್ತಿ ವಹಿಸಲಿಲ್ಲ. ಆ. 25ರಷ್ಟು ಪೇಟೆ ಬಂದ್ ಆಗಿತ್ತು. ಬಾಳೆಹೊನ್ನೂರಿನಲ್ಲೂ ವ್ಯಾಪಾರ ವಹಿವಾಟು ಮಾಮೂಲಾಗಿತ್ತೆನ್ನಲಾಗಿದೆ.

ಬಂದ್‌ಗೆ ಟಿವಿ, ರೇಡಿಯೋ "ಕೊಡುಗೆ" !

ರಾಷ್ಟ್ರದ, ರಾಜ್ಯದ ಬೇರೆ ಕಡೆಗಳಲ್ಲಿ ಹೇಗೇ ಇರಲಿ, ಹಳ್ಳಿಗಾಡಿನಲ್ಲಂತೂ ಬಂದ್ ಬಗ್ಗೆ ಪ್ರಚಾರ ನಡೆಸಿದ್ದು 'ಕೇಂದ್ರ ಸರ್ಕಾರದ, ದೂರದರ್ಶನ ಮತ್ತು ಆಕಾಶವಾಣಿಗಳೇ !

ಅವುಗಳು ಮೂರು ಹೊತ್ತೂ ಬಂದ್ ವಿರುದ್ಧವಾಗಿ ಇನ್ನಿಲ್ಲದ ರೀತಿಯಲ್ಲಿ ಪ್ರಸಾರ ಮಾಡಿದ್ದು ನೋಡಿ ಹಳ್ಳಿಗಾಡಿನ ಜನ "ಏನೋ ಭಾರೀ ಬಂದ್ ನಡೆಯಬಹುದೆಂಬ" ನಿರೀಕ್ಷೆಯಲ್ಲಿ ಪೇಟೆಗಳಿಗೆ ಬರಲೇ ಇಲ್ಲ. ಬಸ್‌ಗಳೆಲ್ಲ ಖಾಲಿ ಖಾಲಿ ಓಡಾಡಿದವು.

2–3 ಬಾಗಿಲು ತೆಗೆದಿಟ್ಟುಕೊಂಡಿದ್ದ ಅಂಗಡಿಗಳೂ ಖಾಲಿ ಹೊಡೆದವು ಎನ್ನುವ ಮಟ್ಟಿಗೆಂದರೆ, ಈ ಹಿಂದೆಲ್ಲ ಮಧ್ಯಾಹ್ನದ ನಂತರ ಪೂರ್ತಿ ಬಾಗಿಲು ತೆಗೆದು ಬಿರುಸಿನ ವ್ಯವಹಾರ ನಡೆಯುತ್ತಿದ್ದರೆ, ಈ ಬಾರಿ ಎಷ್ಟೋ ಅಂಗಡಿಗಳವರು ಜನಸಂಚಾರವೇ ಇಲ್ಲದ್ದು ನೋಡಿ, ಮಧ್ಯಾಹ್ನದ ನಂತರ ಪೂರ್ತಿ ಬಾಗಿಲು ಮುಚ್ಚಿ 'ರಜಾ' ಅನುಭವಿಸಿದ್ದು ಹಲವಾರು ಕಡೆ ಕಂಡು ಬಂತು !

ಜಯಪುರ ಗಣೇಶೋತ್ಸವ : ವಿ॥ ಸುಧೀರ್ ಕುಮಾರ್‌ರ ಭರತನಾಟ್ಯವಿದೆ

ಜಯಪುರ : ಇಲ್ಲಿನ ಗಣೇಶೋತ್ಸವದಲ್ಲಿ ಸೆ. 12ರ ಸಂಜೆ ವಿ॥ ಸುಧೀರ್ ಕುಮಾರ್ ಮತ್ತು ಸಂಗಡಿಗರಿಂದ ಭರತನಾಟ್ಯ ಕಾರ್ಯಕ್ರಮವಿದೆ ಕೌಳಿ ಎಸ್ಟೇಟ್‌ನ ಕೆ. ಸಿ. ರಾಮಪ್ಪಗೌಡರಿಂದ ಅವರಿಗೆ ಸನ್ಮಾನ ಸಮಾರಂಭವೂ ಏರ್ಪಾಡಾಗಿದೆ

ಕಳೆದ ವರ್ಷ ರಾಜ್ಯ ಭರತ ನಾಟ್ಯ ವಿದ್ವತ್ ಪರೀಕ್ಷೆಯಲ್ಲಿ 3ನೇ ರ್‍ಯಾಂಕ್ ಪಡೆದಿರುವ ಜಯಪುರದವರೇ ಆದ ಸುಧೀರ್ ಕುಮಾರ್‌ರವರ ಬಗ್ಗೆ 13-11-88ರ 'ಮುಂಜಾವು' ಪರಿಚಯ ಲೇಖನ ಪ್ರಕಟಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಹೊಸ ಭಾಷಾ ಸೂತ್ರ ಅಕಾಲ ಜಾರಿಗೆ ವಿರೋಧ

ಶೃಂಗೇರಿ : ಶೈಕ್ಷಣಿಕ ವರ್ಷದ ನಡುವಿನಲ್ಲಿ ಹೊಸ ಭಾಷಾ ಸೂತ್ರ ಜಾರಿಗೆ ತರುವುದನ್ನು ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಮತ್ತು ಪ.ಪೂ. ಕಾಲೇಜು ಪ್ರಿನ್ಸಿಪಾಲರ ಸಂಘ ತೀವ್ರವಾಗಿ ವಿರೋಧಿಸಿದೆ.

ಹಿಂದಿನ ಪದ್ಧತಿಯಲ್ಲೇ ಈಗಾಗಲೇ 3 ತಿಂಗಳಿಗೂ ಹೆಚ್ಚು ಕಾಲ ಪಾಠ ಪ್ರವಚನಗಳು ನಡೆದಿವೆ. ಅರ್ಧ ವಾರ್ಷಿಕ ಪರೀಕ್ಷೆಗಳು ಕೂಡ ಆ ಪದ್ಧತಿಯಲ್ಲೇ ನಡೆಯಲಿವೆ. ಈಗ ವಿದ್ಯಾರ್ಥಿಗಳು ಪುನಃ ಹೊಸ ಪುಸ್ತಕ ಕೊಂಡು ಅಭ್ಯಾಸ ಮಾಡಬೇಕಾಗುವುದು ಇನ್ನೂ ಹಲವಾರು ಬಹುಮುಖ್ಯವಾದ ಸಮಸ್ಯೆಗಳು ಎದುರಾಗುವ ಕಾರಣ ಹೊಸ ಸೂತ್ರದ ಜಾರಿಯನ್ನು ಈ ವರ್ಷದ ಮಟ್ಟಿಗೆ ತಡೆಹಿಡಿಯಬೇಕೆಂದು ಸಂಘ ಸರ್ಕಾರವನ್ನು ಒತ್ತಾಯಿಸಿದೆ

ಹರಿಹರಪುರಕ್ಕೆ ಸಕ್ಕರೆ, ಸೀಮೆಎಣ್ಣೆ ಖೋತಾ

ಹರಿಹರಪುರ : ಇಲ್ಲಿನ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಬೊಮ್ಲಾಪುರ ವ್ಯಾಪ್ತಿಯ ಅವಶ್ಯಕ ಸಾಮಗ್ರಿಗಳೂ ಕೂಡ ವಿತರಣೆಗೆ ದೊರಕುತ್ತಿದ್ದು, ಈ ಮೊದಲು ತಿಂಗಳಿಗೆ 33 ಕ್ವಿಂಟಾಲ್ ಸಕ್ಕರೆ ಬರುತ್ತಿದ್ದು ಅದು 27 ಕ್ವಿಂಟಾಲಿಗೆ ಇಳಿದು, ನಂತರ ಬೊಮ್ಲಾಪುರ ವ್ಯಾಪ್ತಿಗೆ ವಿತರಣೆಯಾಗುವ ಸಕ್ಕರೆ ಅಲ್ಲಿಯ ನ್ಯಾಯ ಬೆಲೆ ಅಂಗಡಿಗೆ ವರ್ಗಾಯಿಸಲ್ಪಟ್ಟ ನಂತರ ತಿಂಗಳಿಗೆ 18 ಕ್ವಿಂಟಾಲ್ ಮಾತ್ರ ಬರುತ್ತಿದ್ದು, ಈಗ 11 ಕ್ವಿಂಟಾಲಿಗೆ ಇಳಿದಿದೆ.

ಸೀಮೆ ಎಣ್ಣೆ ತಿಂಗಳಿಗೆ 5,000 ದಿಂದ 6,000 ಲೀ.ವರೆಗೆ ಸರಬರಾಜಾಗುತ್ತಿದ್ದು, ಇದರಲ್ಲಿ ಬೊಮ್ಲಾಪುರ ವ್ಯಾಪ್ತಿಯ ಬಳಕೆದಾರರಿಗೂ ವಿತರಿಸಲಾಗುತ್ತಿದೆ.

ಆದರೆ ಕಳೆದ ತಿಂಗಳ 5 ರಂದು ಕೇವಲ 2,000 ಲೀಟರ್ ಸೀಮೆ ಎಣ್ಣೆ ಸರಬರಾಜಾಗಿದ್ದು ಬರುತ್ತಲೇ ಖಾಲಿಯಾಗಿದೆ. ಪುನಃ ಆ. 24ರಂದು ಕೇವಲ 1,000 ಲೀಟರ್ ಸೀಮೆ ಎಣ್ಣೆ ಸರಬರಾಜಾಗಿದೆ. ವಿತರಣೆಗೆ 1,000 ಕಾರ್ಡುಗಳಿದ್ದು ಕಾರ್ಡೊಂದರ ಕೇವಲ ಒಂದು ಲೀಟರ್ ಸೀಮೆ ಎಣ್ಣೆ ಪಡೆದು ಮುಂದಿನ ಸಾರಿ ಸೀಮೆ ಎಣ್ಣೆ ಬರುವವರೆಗೆ ಪರದಾಡಬೇಕಾಗಿದೆ.

ಕೊಪ್ಪ ತಾಲ್ಲೂಕಿಗೆ ಈ ರೀತಿ ಸರಬರಾಜು ಕಡಿತಗೊಂಡಿದ್ದರೂ ನರಸಿಂಹರಾಜಪುರಕ್ಕೆ 8,000 ಲೀಟರ್ ಮತ್ತು ಶೃಂಗೇರಿ ತಾಲ್ಲೂಕಿಗೆ 6 ಸಾವಿರ ಲೀಟರ್ ಸೀಮೆ ಎಣ್ಣೆ ಹೆಚ್ಚುವರಿ ಸರಬರಾಜಾದದ್ದು ಈ ತಿಂಗಳಿನ ವಿಶೇಷ.

5 ವರ್ಷದ ಹಿಂದೆ ಬಡ್ತಿಯಿಂದ ಆರಂಭವಾದ ಪೋಲೀಸ್ ಠಾಣೆಯ ಸುಮಾರು 25 ಮಂದಿ ಸಿಬ್ಬಂದಿಯೂ ಸೇರಿದಂತೆ ಅನೇಕ ಸರ್ಕಾರಿ ನೌಕರರಿಗೆ ಪಡಿತರ ಕಾರ್ಡ್ ಪೂರೈಸಲಾಗಿಲ್ಲ. ಹೀಗಿರುವಾಗ ಗಣೇಶ ಚತುರ್ಥಿ ಮತ್ತು ಇತರ ಹಬ್ಬಗಳ ಸಂದರ್ಭದಲ್ಲೇ ಸೀಮೆ ಎಣ್ಣೆಯ ವಿತರಣೆಯೂ ಕಡಿಮೆಯಾಗಿದ್ದು, ಬಳಕೆದಾರರ ಆಕ್ರೋಶ ಭುಗಿಲೇಳುವ ಮೊದಲೇ ಈ ಸಮಸ್ಯೆಯನ್ನು ಸಂಬಂಧಪಟ್ಟ ಇಲಾಖೆ ಸರಿಪಡಿಸುವುದು ಒಳ್ಳೆಯದು ಎಂದು ತಾ। ಬಿ.ಜೆ.ಪಿ. ಅಧ್ಯಕ್ಷ ಬಿ. ಎಂ. ರಘುನಾಥ್ ಎಚ್ಚರಿಸಿದ್ದಾರೆ.

ಲಾಟರಿ : ಕೊಪ್ಪಕ್ಕೆ 2 ಲಕ್ಷ

ಸೆ. 1ರಂದು ನಡೆದ ರಾಜ್ಯ ಲಾಟರಿಯಲ್ಲಿ ಕೊಪ್ಪದಲ್ಲಿ ಮಾರಾಟವಾದ EOJ 239594 ನಂಬರಿನ ಟಿಕೆಟ್ಟಿಗೆ 2 ಲಕ್ಷ ರೂ. ಬಂಪರ್ ಬಹುಮಾನ ಬಂದಿದೆ.

ಫ್ರಾನ್ಸಿಸ್ ಎಂಟರ್ ಪ್ರೈಸಸ್

ಕೇರಾಫ್ ಫ್ರಾನ್ಸಿಸ್ ಫೈನಾನ್ಸ್,

ಮುಖ್ಯ ರಸ್ತೆ, ಕೊಪ್ಪ.

ಸೈಟು, ಮನೆ, ಎಸ್ಟೇಟ್, ಜಮೀನು ಇತ್ಯಾದಿಗಳನ್ನು ಮಾರಲು ಅಥವಾ ಕೊಳ್ಳಲು ಬಯಸುವವರು, ಹಾಗೂ ಬಾಡಿಗೆ ಮನೆಯುವರು ಮತ್ತು, ಬಾಡಿಗೆಗೆ ಮನೆ ಬೇಕಾದವರು.

ನಮ್ಮನ್ನು ಸಂಪರ್ಕಿಸಿ.

10 ಸೈಟು, ಮೇಲಿನಪೇಟೆಯಲ್ಲಿ 1 ಆರ್‌ಸಿಸಿ ಮನೆ (ಎಲ್ಲಾ ವಿಧದ ಸೌಕರ್ಯವುಳ್ಳದ್ದು), ಬಸ್‌ಸ್ಟ್ಯಾಂಡ್ ಸಮೀಪ 1 ಹೋಟೆಲ್, ಕೊಪ್ಪದಿಂದ ಸುಮಾರು 10 ಕಿ. ಮೀ. ದೂರದಲ್ಲಿ 1 ಎಸ್ಟೇಟ್ ಈಗಲೇ ಮಾರಾಟಕ್ಕಿವೆ. ಆಸಕ್ತರು ಕೂಡಲೇ ಸಂಪರ್ಕಿಸಿ.

ಎ. ಫ್ರಾನ್ಸಿಸ್ ಕೊತಡೀಲಾ,

ಫ್ರಾನ್ಸಿಸ್ ಫೈನಾನ್ಸ್, ಕೊಪ್ಪ

ಭಾರತ ಬಂದ್

ಆಳುವ ಕಾಂಗ್ರೆಸ್ಸು ಒಂದೆರಡು ಮಿತ್ರ ಪಕ್ಷಗಳನ್ನು ಬಿಟ್ಟು ದೇಶದ ಉಳಿದೆಲ್ಲ ವಿರೋಧ ಪಕ್ಷಗಳೂ ಒಟ್ಟಾಗಿ ಸಂಘಟಿಸಿದ್ದ ಆಗಸ್ಟ್ 30ರ 'ಭಾರತ ಬಂದ್' ಸಂಪೂರ್ಣ ಯಶಸ್ವಿಯಾಗದಿದ್ದರೂ, ಆಡಳಿತ ಪಕ್ಷದ ಮತ್ತು ಕೇಂದ್ರದ ಆಳುವ ಸರ್ಕಾರದ ಸ್ವಂತ ಪ್ರಚಾರ ಮಾಧ್ಯಮಗಳಂತಾಗಿರುವ ಆಕಾಶವಾಣಿ, ದೂರದರ್ಶನಗಳು ಹೇಳಿಕೊಂಡಂತೆ "ವಿಫಲ" ವಾಗಿದೆ ಎಂಬುದೂ ಅಪ್ಪಟ ಸುಳ್ಳು.

ವಿರೋಧ ಪಕ್ಷಗಳೊಳಗಿನ ಭಿನ್ನಮತ, ಕನಿಷ್ಠ ಕಾರ್ಯಕ್ರಮವೊಂದರ ಆಧಾರದಲ್ಲಿ ಒಟ್ಟಾಗಿ ಶ್ರಮಿಸಲಾರದ ವೈಯಕ್ತಿಕ ನಾಯಕತ್ವದ ಆಕಾಂಕ್ಷೆಗಳು, ಇವುಗಳಿಂದಾಗಿ ಅವರೊಳಗೇ ಎಡೆಬಿಡದೆ ನಡೆಯುತ್ತಿರುವ ಮನೆ ಮುರುಕತನ ಇವೆಲ್ಲವುಗಳಿಂದ ದೇಶದ ಜನತೆಯಲ್ಲಿ ಈ ಪಕ್ಷಗಳ ಬಗೆಗಿನ ಪ್ರೀತಿ, ನಂಬಿಕೆ ಬಹುವಾಗಿ ಕ್ಷೀಣಿಸಿದೆ. ಸಾಲದ್ದಕ್ಕೆ ಹೆಗಡೆ, ಎನ್‌ಟಿಆರ್‌ಗಳಂಥವರ ನಾಚಿಕೆಯಿಲ್ಲದ ಭ್ರಷ್ಟ, ಹುಚ್ಚು ಆಳ್ವಿಕೆಗಳೂ ವಿರೋಧ ಪಕ್ಷಗಳ ವಿಶ್ವಾಸಾರ್ಹತೆಯನ್ನು ಮಣ್ಣು ಮಾಡಿವೆ.

ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಈ ವಿರೋಧ ಪಕ್ಷಗಳು ಕರೆಕೊಟ್ಟಿರುವ ಬಂದ್ ಇದು. ಇಷ್ಟೂ ಸಾಲದೆಂದರೆ, ಬಂದ್‌ನಲ್ಲಿ ಭಾಗವಹಿಸುವವರ ಬಗ್ಗೆ ತೀರಾ ಬಿಗುವಿನ ಕ್ರಮಗಳ ಪ್ರಕಟಣೆ–ಮುಖ್ಯವಾಗಿ ಕಾರ್ಮಿಕರು, ನೌಕರರ ಬಗೆಗಂತೂ ಅವರು ಬಂದ್‌ಗೆ ಬೆಂಬಲಿಸಿ ಅಂದು ಗೈರು ಹಾಜರಾದರೆ "ನಿಮ್ಮ ಪ್ರಾಣ ತೆಗೆಯುತ್ತೇವೆ" ಎಂಬ ಒಂದು ಬೆದರಿಕೆ ಮಾತ್ರ ಹಾಕಿಲ್ಲ; ಮತ್ತೆಲ್ಲ ತರದ ಬೆದರಿಕೆಯನ್ನೂ ಹಾಕಲಾಗಿತ್ತು. ಕಛೇರಿಗಳಲ್ಲೇ ಆ. 29ರಿಂದಲೂ ಊಟ–ತಿಂಡಿ, ಸಿನಿಮಾ ಸಹ ಒದಗಿಸಲಾಗಿತ್ತು! ಇನ್ನು ಕಾಂಗ್ರೆಸ್ ಆಳ್ವಿಕೆಯ ಬಹುತೇಕ ರಾಜ್ಯಗಳಲ್ಲಿ ಬಂದ್ ದಿನ ಮೆರವಣಿಗೆ ನಡೆಸುವುದನ್ನು ಸಾರಾಸಗಟಾಗಿ ನಿಷೇಧಿಸಲಾಗಿತ್ತು. ಅಂದರೆ 'ತುರ್ತುಪರಿಸ್ಥಿತಿ' ಎಂಬುದನ್ನು ಹೇರದೆಯೇ ಅದಕ್ಕಿಂತಲೂ ಹೆಚ್ಚು ನ್ಯಾಯ ಬಾಹಿರವಾದ 'ಕ್ರಮ'ಗಳನ್ನು ಬಳಸಲಾಗಿತ್ತು ಎನ್ನಬಹುದಲ್ಲವೆ?

ಇದೆಲ್ಲದಕ್ಕೆ ಕಿರೀಟವಿಟ್ಟಂತೆ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡದಂತೆ ಹಾಗೂ ಜನರು ಬಂದ್‌ಗೆ ಬೆಂಬಲಿಸದಂತೆ 'ಮನವಿ' ಮಾಡುವ ಹೆಸರಲ್ಲಿ ಬಹುತೇಕ ಕಡೆಗಳಲ್ಲಿ ತೋಳು ಮಡಿಚಿಕೊಂಡು ಹರಿಹಾಯುತ್ತಿದ್ದ ಕಾಂಗ್ರೆಸ್ 'ಕಾರ್ಯಕರ್ತರ' ಪಡೆಗಳು.

ಇಷ್ಟೆಲ್ಲದರ ಎದುರು ಅಷ್ಟಾದರೂ ಯಶಸ್ವಿಯಾದ ಬಂದ್ ಈ ಹೀನ ಸರ್ಕಾರಕ್ಕೆ ಏನನ್ನು ಸಾರುತ್ತದೆ?

ಹೀಗೆ ಯೋಚಿಸೋಣ: ಈ ವಿರೋಧ ಪಕ್ಷಗಳು ಇಷ್ಟೊಂದು ಹೆಸರು ಕೆಡಿಸಿಕೊಂಡಿರಲಿಲ್ಲ; ಎನ್‌ಟಿಆರ್ ಇಷ್ಟು ಏಲು ಆಳ್ವಿಕೆಯನ್ನೂ, ಹೆಗಡೆ ಇಷ್ಟು ದಿವಾಳಿ ಆಡಳಿತವನ್ನೂ ದೇವಿಲಾಲ್ ಇಷ್ಟೊಂದು ಸ್ವಜನ ಪಕ್ಷಪಾತಿ ಆಡಳಿತವನ್ನೂ ನಡೆಸಿರಲಿಲ್ಲ; ವಿ. ಪಿ. ಸಿಂಗ್ ಕೂಡ ಅವರ 'ಇಮೇಜ್' ನಷ್ಟೇ ನಿಜವಾಗಿಯೂ ಶುದ್ಧಹಸ್ತರಾಗಿದ್ದರು; ಇವರೆಲ್ಲರಿಗೂ ದೆಹಲಿ ಸಿಂಹಾಸನವೇ 'ಕನಿಷ್ಠ ಕಾರ್ಯಕ್ರಮ' ವಾಗಿರಲಿಲ್ಲ — ಎಂದಿಟ್ಟುಕೊಳ್ಳೋಣ. ಆಗೇನಾಗುತ್ತಿತ್ತು?

ಉದಾಹರಣೆಗೆ, ಆಂಧ್ರದಲ್ಲಿ ಎನ್‌ಟಿಆರ್ ಸರ್ಕಾರವನ್ನು ಉರುಳಿಸಿ, ನಾದೆಂಡ್ಲ ಎಂಬ ಕೈಗೊಂಬೆಯನ್ನು ಮುಖ್ಯ ಮಂತ್ರಿಯಾಗಿ ಕೇಂದ್ರ ಸರ್ಕಾರ ಹೇರಿದಾಗ, ಇಡೀ ದೇಶಾದ್ಯಂತ ಅದರ ವಿರುದ್ಧ ಪ್ರತಿಭಟನೆ, ಬಂದ್ ನಡೆಯಿತಲ್ಲ? ಆಗ ಜನರು ತಾವಾಗಿಯೇ ಎಷ್ಟು ಉತ್ಸಾಹದಿಂದ ಭಾಗವಹಿಸಿದ್ದರಲ್ಲ ಈಗಲೂ ಹಾಗೇ ಆಗುತ್ತಿರಲಿಲ್ಲವೆ?

ಅಂದರೆ ಈ ಸಲದ ಬಂದ್‌ಗೆ ಜನತೆ ಅಂದಿನಷ್ಟು ಉತ್ಸಾಹದಲ್ಲಿ ಮುಂದೆ ಬರಲಿಲ್ಲ; ಅಂಥ ಉತ್ಸಾಹ ಮೂಡಿಸುವಲ್ಲಿ ಈ ವಿರೋಧ ಪಕ್ಷಗಳ ಯೋಗ್ಯತೆ, ಅರ್ಹತೆ, ಸಾಮರ್ಥ್ಯಗಳು ಕುಗ್ಗಿವೆ, ಕಳೆಗುಂದಿವೆ ಎಂದಾಗುತ್ತದೆ. ಹೊರತು, ಜನ ಕೇಂದ್ರ ಸರ್ಕಾರವನ್ನು, ಅದರ ಅನಾಚಾರ, ದುರಾಡಳಿತಗಳನ್ನು ಬೆಂಬಲಿಸಿದರು – ಎಂದೇನೂ ಅರ್ಥವಲ್ಲ. ನಿಜವಾಗಿ ಹೇಳುವುದಾದರೆ, ಕೇಂದ್ರದ ಬಗೆಗೆ ಜನತೆಯಲ್ಲಿ ತೀವ್ರವಾಗಿ ಸಿಟ್ಟು, ಅಸಮಾಧಾನ ಇರುವುದರಿಂದಲೇ ಇಷ್ಟು ಮಟ್ಟಿಗೆ ಬಂದ್ ನಡೆಯಿತು ಎನ್ನುವುದು ಸೂಕ್ತ.


ಅಂದರೆ, ಈ ಸರ್ಕಾರದ ಅವ್ಯವಹಾರ, ದುರಾಡಳಿತ ಹೆಚ್ಚಾಯಿತು, ಅದು ರಾಜೀನಾಮೆ ಕೊಡಬೇಕು–ಎಂಬ ಒತ್ತಾಯಕ್ಕೆ ಈ ದೇಶದ ಜನರ ಬೆಂಬಲವಿದ್ದಾಗ್ಯೂ, ಆ ರೀತಿಯ ಒತ್ತಾಯದ ನಾಯಕತ್ವ ವಹಿಸಿರುವವರ ಬಗೆಗಿನ ಅಪನಂಬಿಕೆ ಮಾತ್ರ ಜನರ ಈ ಉದಾಸೀನಕ್ಕೆ ಕಾರಣ ಎನ್ನುವುದು ಸ್ಪಷ್ಟ.

ಕೇಂದ್ರ ಸರ್ಕಾರ ಯಾಕೆ ರಾಜೀನಾಮೆ ನೀಡಬೇಕು ಎಂಬ ಪ್ರಶ್ನೆ ಎದುರಾಗುತ್ತದೆ. ಬೇರೆಲ್ಲಾ ರಂಗಗಳು ಹೋಗಲಿ, ದೇಶದ ರಕ್ಷಣೆಯಂಥ ಬಹು ಮುಖ್ಯ ವಿಚಾರದಲ್ಲೇ ಭ್ರಷ್ಟತೆ ತಾಂಡವವಾಡಿದೆ ಎಂದ ಮೇಲೆ ಅಂಥ ಸರ್ಕಾರ ಈ ದೇಶವನ್ನು ಇನ್ನೇನು ರಕ್ಷಣೆ ಮಾಡೀತು? ಅಂಥ ಸರ್ಕಾರ ಯಾಕೆ ಇರಬೇಕು?

ಬೋಫೋರ್ಸ್ ಫಿರಂಗಿ ವ್ಯವಹಾರ ಈಗಾಗಲೇ ಹಳೆಯದಾಯಿತು. ಅದು ಮಾತ್ರವಲ್ಲದೆ, ಸೇನೆಗೆ ಬೇಕಾದ ಸಬ್‌ಮೆರಿನ್ ಮತ್ತು ಹೆಲಿ ಕಾಪ್ಟರ್‌ಗಳ ಖರೀದಿಯಲ್ಲೂ 'ಕಮಿಶನ್' ಎಂಬ ಲಂಚ ನಡೆದಿದೆ ಎಂಬುದು ಈಗಾಗಲೇ ಬಯಲಾಗಿದೆ. ಆದರೆ ರಾಜೀವ್ ಗಾಂಧಿ ಇದೆಲ್ಲವನ್ನೂ ನಿರಾಕರಿಸುತ್ತಿದ್ದಾರೆಯೇ ಹೊರತು ಸಮರ್ಪಕವಾದ ಒಂದು ತನಿಖೆಗೆ ಕೂಡ ಅವಕಾಶ ಕೊಟ್ಟಿಲ್ಲ. ಅಷ್ಟೇ ಅಲ್ಲ. ಭಾರತ ಸಂವಿಧಾನದ ಆಧಾರದಲ್ಲೇ ಕೆಲಸ ನಿರ್ವಹಿಸುವ 'ಕಂಟ್ರೋಲರ್ ಮತ್ತು ಆಡಿಟರ್ ಜನರಲ್' (ಸಿ.ಎ ಜಿ.) ಅವರು ಇಡೀ ಬೋಫೋರ್ಸ್ ವ್ಯವಹಾರದ ಎಲ್ಲ ಅಕ್ರಮ ಅಂಶಗಳನ್ನೂ ಬಯಲು ಮಾಡಿದಾಗ ರಾಜೀವ್ ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷಿಸುವ ಬದಲು ಸರ್ವೋಚ್ಚ ನ್ಯಾಯಾಲಯದಷ್ಟೇ ಪ್ರಾಮುಖ್ಯದ ಸಿಎಜಿಯವರ ಮೇಲೆಯೇ ತಮ್ಮ ಬಾಡಿಗೆ ಬಂಟರ ಎಲುಬಿಲ್ಲದ ನಾಲಿಗೆಗಳ ಪ್ರಹಾರ ಹರಿಸಿದ್ದಾರೆ. ಈ ಮೂಲಕ ಈ ಅತಿ ಮುಖ್ಯ ಕ್ಷೇತ್ರದಲ್ಲೂ ನಡೆದ ಲಂಚಾವತಾರಕ್ಕೂ ತನಗೂ ನೇರ ಸಂಬಂಧವಿದೆಯೆಂಬುದನ್ನು ಅನುಮಾನಕ್ಕೆಡೆಯಿಲ್ಲದಂತೆ ತಾವೇ ಸಾಬೀತು ಮಾಡಿಕೊಂಡಿದ್ದಾರೆ.

ದೇಶದ ಸರ್ವೋಚ್ಚ ಆಡಳಿತಗಾರನ ಕೈಯೇ ಇಷ್ಟು ಶುದ್ಧವೆಂದ ಮೇಲೆ ದೇಶವನ್ನಾಳುವ ಇನ್ನಿತರರ ಬಗ್ಗೆ ಹೇಳುವುದೇನಿದೆ? ಇಡೀ ದೇಶ ಇಂದು ಲಂಚ, ಅದಕ್ಷತೆ, ಅಕ್ರಮಗಳ ಕೊಳಚೆಗುಂಡಿಯಾಗಿದೆ.

(3ನೇ ಪುಟಕ್ಕೆ)



ಹೂದೋಟದಲ್ಲಿ ಹೂವಿನ ಗೆಳೆಯರು

ಹೂವಿಂದ ಹೂವಿನೊಳಗೆ, ಹೂವಿಂದ ಹೂವಿನೊಳಗೆ
ಅದರ ಸುವಾಸನೆ ಮಾನವನ ಮೂಗಿಂದ ಮೂಗಿನೊಳಗೆ
ಅದು ನನ್ನ ಮನೆಯ ಹೂದೋಟದ ಸುಗಂಧ
ಸುವಾಸನೆ ಚೆಲ್ಲಿ, ಚೆಲ್ಲಿ ಹರಡುತ್ತಿದೆ ನನ್ನ ಮನೆಯಲ್ಲಿ.

ಆ ಸುವಾಸನೆಗೆ ಬಂದರು ಹೂವಿನ ಗೆಳೆಯರು
ಗುಂಯ್ ಗುಂಯ್ ಎಂದು ಹಾಡುತ್ತ ಬಂದ ದುಂಬಿ
ಗಲ್ ಗಲ್ ಎಂದು ಕುಣಿಯುತ್ತ ಬಂದ ನವಿಲು

ಹೂವಿನ ಸುವಾಸನೆಯಲ್ಲದೆ
ಈಗ ನನ್ನ ಹೂದೋಟದಲ್ಲಿರುವುದು—
ಗಲ್ ಗಲ್ ಎನ್ನುವ ಡ್ಯಾನ್ಸರ್
ಗುಂಯ್ ಗುಂಯ್ ಎನ್ನುವ ಮೃದಂಗ
ಹಚ್ಚ ಹಸುರಿನ ಹುಲ್ಲಿನಲ್ಲಿ ಛಂಗ್ ಛಂಗ್
ಎಂದು ಹಾರುವ ಮರಿ ಜಿಂಕೆ.

ಬಣ್ಣ, ಬಣ್ಣದ ಹೂವಿನ ಅಂದ
ಆಹಾ, ಎಷ್ಟು ಚೆಂದ! ಹಾಗಿದ್ದರೆ ನನ್ನ ಮನಸ್ಸು
ಅಷ್ಟೇ ಚೆಂದ.

ವಿ. ವಾಣಿ,
10ನೇ ತರಗತಿ.

ಅಜ್ಜನ ಗುಜರಿ ಸೈಕಲ್

ನಮ್ಮಯ ಅಜ್ಜನ
ಗುಜರಿ ಸೈಕಲ್
ಪೇಟೆಗೆ ಬಂದಿತ್ತು!

ಗರ ಗರ ಸರ ಸರ
ಶಬ್ದವ ಮಾಡುತ
ಹರಿಯುತ ಬರುತಿತ್ತು.

ಗಡಗಡ ನಡುಗುವ
ಅಜ್ಜನ ಕೈಯಿ
ಬೆಲ್ಲನು ಒತ್ತಿತ್ತು.

ಟ್ರಿಣ್ ಟ್ರಿಣ್
ಶಬ್ದವ ಮಾಡುತ ಸೈಕಲ್
ರಸ್ತೆಯ ಅಳೆದಿತ್ತು!

ಗೋಲಿಯನಾಡುವ
ಹುಡುಗರ ಮಧ್ಯೆ
ಸೈಕಲ್ ನುಗ್ಗಿತ್ತು!

ತಡಬಡಿಸುತ್ತ
ಚಿಣ್ಣರ ಗುಂಪು
ಕಪ್ಪೆಗಳಾಗಿತ್ತು.

ಸೈಕಲ್ ಜೊತೆಗೇ
ಅಜ್ಜನೂ ಬೀಳಲು
ನಗೆಯು ಉಕ್ಕಿತ್ತು.

ಅಜ್ಜನ ಮೇಲೆತ್ತಿ
ಸೈಕಲ್ ನೋಡಲು
ಪುಡಿ ಪುಡಿಯಾಗಿತ್ತು.

ಹ್ಯಾಂಡ್ಲು ಪೆಡಲು
ಚಕ್ರ ಸೀಟು
ಗುಜರಿಯೇ ಆಗಿತ್ತು.

ಮೆಲ್ಲನೆ ಎದ್ದ
ಅಜ್ಜನ ಮುಖದಲಿ
ಮುನಿಸಿನಗು ಮೂಡಿತ್ತು!

—ಚಾಣಂಕಿ ಪ್ರಕಾಶ್,
ಕುಡಿನಲ್ಲಿ.

ಕಿರಣ

ನಾ ಮುಂಜಾನೆ ಕಂಡೆ
ಸೂರ್ಯನ ಕಿರಣ

ಆ ಕಿರಣ ಏಳಿಸಿತು ನನ್ನ
ಮೊಗಕ್ಕೆ ಮುತ್ತಿಕ್ಕಿ

ಆ ಕಿರಣದ ಹೊಳಪಿಗೆ
ನಾ ಮಾರು ಹೋದೆ

ಆ ಕಿರಣದ ಪ್ರಕಾಶಕ್ಕೆ ನಾ
ಕಣ್ಣು ಮುಚ್ಚಿದೆ.

—ಎಸ್. ಅಂಜನಾ,
10ನೇ ತರಗತಿ, ಕೊಪ್ಪ.

ಕುವೆಂಪು ಗೌರವಾರ್ಥ ಕೈಗೊಳ್ಳುವ ಯಾವುದೇ ಶಾಶ್ವತ ಯೋಜನೆ ಕುಪ್ಪಳಿ — ಹಿರಿಕೊಡಿಗೆ ನಡುವಿನ ಗಡಿಕಲ್ಲಿನಲ್ಲಿ ಆಗಲಿ

ಸಾರ್ವಜನಿಕರ ಮತ್ತು ಸಂಬಂಧಪಟ್ಟವರೆಲ್ಲರ ಗಂಭೀರ ಪರಿಶೀಲನೆ ಹಾಗೂ ನಿರ್ಣಯಕ್ಕಾಗಿ ಒಂದು ಪ್ರಸ್ತಾಪ.

ಮಾನ್ಯರೆ,

ಡಾ॥ ಕುವೆಂಪುರವರ ಜನ್ಮಸ್ಥಳವಾದ ಕೊಪ್ಪ ತಾಲ್ಲೂಕಿನ ಹಿರಿಕೊಡಿಗೆಯನ್ನು ಅಭಿವೃದ್ಧಿಪಡಿಸಿ, ಪ್ರವಾಸಿ ತಾಣವನ್ನಾಗಿ ಮಾಡುವ ಸಲುವಾಗಿ "ವಿಶ್ವಮಾನವ ಸಂದೇಶ ಭವನ"ವನ್ನು ನಿರ್ಮಿಸಲು 1.60 ಲಕ್ಷ ರೂ.ಗಳನ್ನು ಚಿಕ್ಕಮಗಳೂರು ಜಿಲ್ಲಾ ಪರಿಷತ್‌ನಿಂದ ಬಿಡುಗಡೆ ಮಾಡಿರುವರಂತೆ. ರಾಷ್ಟ್ರಕವಿಯೊಬ್ಬರ ಜನ್ಮಸ್ಥಳದ ಅಭಿವೃದ್ಧಿಗೆ ಹಾಕಿರುವ ಯೋಜನೆ ಶ್ಲಾಘನೀಯ. ಆದರೆ ಅಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯದ ಶಾಖೆಯನ್ನು ತೆರೆಯಲು ನಡೆಯುತ್ತಿರುವ ಪ್ರಯತ್ನದ ಬಗ್ಗೆ ಒಂದು ಮಾತು.

ಈ ಹಿರಿಕೊಡಿಗೆಯು ಕೊಪ್ಪದಿಂದ 7 ಕಿ.ಮೀ. ದೂರದಲ್ಲಿರುವ ಕೇವಲ ನಾಲ್ಕೈದು ಮನೆಗಳ ಒಂದು ಊರು. ಬಹಳ ದೂರದಲ್ಲಿ ಅಲ್ಲೊಂದಿಲ್ಲೊಂದು ಮನೆಗಳಿದ್ದು ಸುತ್ತ ಮುತ್ತ ಹತ್ತಿರದಲ್ಲಿ ವಿರಳ ಜನಸಂಖ್ಯೆಯಿದ್ದು, ಇವರಲ್ಲಿ ಸಾಹಿತ್ಯಾಸಕ್ತರೂ ಕಡಿಮೆ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ. ಗ್ರಂಥಾಲಯ ಮತ್ತು 'ವಿಶ್ವಮಾನವ ಸಂದೇಶ ಭವನ'ವನ್ನು ರಾಷ್ಟ್ರಕವಿಗಳ ಈ ಜನ್ಮಸ್ಥಳ ಮತ್ತು ಹುಟ್ಟೂರೆನ್ನಿಸಿದ ಕುಪ್ಪಳಿಗಳ ನಡುವೆ ಇರುವ ಗ್ರಾಮದ ಕೇಂದ್ರ ಸ್ಥಳವಾದ ಗಡೀಕಲ್ (ಹಿರೀಕೊಡಿಗೆ) ನಲ್ಲಿ ಮಾಡುವುದರಿಂದ ಈ ಘನ ಕಾರ್ಯದ ಉದ್ದೇಶಪೂರ್ಣವಾಗುತ್ತದೆ.

ಗಡೀಕಲ್ಲಿನಲ್ಲಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಆಸ್ಪತ್ರೆ, ಬ್ಯಾಂಕ್‌ಗಳಿದ್ದು, ವಿದ್ಯಾರ್ಥಿಗಳು, ಉಪಾಧ್ಯಾಯರು, ಅಧಿಕಾರಿಗಳು ಇರುವುದು ಗಮನೀಯ. ಅಲ್ಲದೆ ಸುತ್ತಮುತ್ತ ಹತ್ತಿರದಲ್ಲಿ ಅನೇಕ ಹಳ್ಳಿ-ಮನೆ-ಜನಸಂಖ್ಯೆಯಿದ್ದು, ಈ ಗಡೀಕಲ್ಲು ಹಂತ-ಹಂತವಾಗಿ ಬೆಳೆಯುತ್ತಿರುವ ತಾಣವಾಗಿದೆ. ಈ ಸ್ಥಳಕ್ಕೆ ಒಂದು ಸಮುದಾಯ ಭವನ ಮತ್ತು ಗ್ರಂಥಾಲಯದ ಅವಶ್ಯಕತೆಯೂ ತೀವ್ರವಾಗಿದೆ. ಈಗಿನ ಸ್ಥಿತಿಯಲ್ಲಿ ಸರ್ಕಾರಕ್ಕೆ ಮನವಿ ಮಾಡಿದರೂ ಒಂದು ಗ್ರಾಮಕ್ಕೆ ಎರಡು ಗ್ರಂಥಾಲಯದ ನೀಡಿಕೆ ಅಸಾಧ್ಯವೆಂಬುದನ್ನು ಹೇಳಬೇಕಾಗಿಲ್ಲ. ಈ ಎಲ್ಲವನ್ನು ಗಮನಿಸಿದಾಗ ಬೆಳೆಯುತ್ತಿರುವ ಈ ಊರು (ಗಡೀಕಲ್) ಗ್ರಂಥಾಲಯದ ಅವಶ್ಯಕತೆಯನ್ನು ತೋರುತ್ತದೆ.

ಈ ನಡುವೆ ಲಂಕೇಶ್ ಪತ್ರಿಕೆಯ 20-8-89 ರ ಸಂಚಿಕೆಯಲ್ಲಿ "ಎಲ್ಲ ಕುವೆಂಪು ಹೆಸರಲ್ಲಿ" ಎಂಬ ಅಂಕಣದಲ್ಲಿರುವ ವಿಚಾರಗಳು ಅಕ್ಷರಶಃ ಸತ್ಯವಾಗಿವೆ. ಹಿಂದೆ, 1970 ರ ಏಪ್ರಿಲ್‌ನಲ್ಲಿ ಆಗಿನ ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರು "ಶ್ರೀ ರಾಮಾಯಣ ದರ್ಶನಂ" ಆವೃತ್ತಿಯನ್ನು ಕೇವಲ ಆರು ರೂಪಾಯಿಗಳಿಗೆ ದೊರಕುವಂತೆ ಕನ್ನಡ ಅಧ್ಯಯನ ಸಂಸ್ಥೆ ರೂಪಿಸಿದ್ದ ಯೋಜನೆಯನ್ನು ಅನುಷ್ಠಾನಗೊಳಿಸಿ, ಶ್ರೀಸಾಮಾನ್ಯನಿಗೆ ಅಗ್ಗದ ಬೆಲೆಯಲ್ಲಿ ಈ ಮಹತ್ ಕೃತಿ ದೊರೆಯುವಂತಾಯಿತು.

ಆದರೆ, ಉತ್ಸಾಹಿ ತರುಣ ಜಿ. ಪ. ಅಧ್ಯಕ್ಷ ಮಂಜುನಾಥ್‌ರವರು ಯೋಚಿಸಿರುವ ಈ ಘನ ಕಾರ್ಯ 4-5 ವರ್ಷ ನಡೆದು ನಂತರ ಕಮರಿ ಹೋಗಬಹುದು. ಆರಂಭದಲ್ಲಿ ಉತ್ಸಾಹ ತೋರುವ ಸಮಿತಿಗಳು ನಂತರ ರಾಜಕೀಯ ಬಣ್ಣ ಪಡೆದು 4-5 ವರ್ಷದಲ್ಲಿ ಬೇಜವಾಬ್ದಾರಿ ತೋರಬಹುದು. ಆಸಕ್ತರು ದೂರದಿಂದ ಈ ಗ್ರಂಥಾಲಯಕ್ಕೆ ದಿನಂಪ್ರತಿ ಬರುವುದಕ್ಕೂ ಕಷ್ಟವೇ. ಆಸಕ್ತರ, ವಿದ್ಯಾರ್ಥಿಗಳ ಜನಸಾಂದ್ರತೆಯಿರುವ ಸೂಕ್ತ ಸ್ಥಳ ಆರಿಸಿ ಗ್ರಂಥಾಲಯ ಸ್ಥಾಪಿಸಿದರೆ ಉದ್ದೇಶ ಪರಿಪೂರ್ಣವಾಗುತ್ತದೆ.

ಈ ಯೋಜನೆ ಬಗ್ಗೆಯಾಗಲಿ, ಸಮಿತಿಯ ಬಗೆಗಾಗಲಿ ದೂಷಣೆಯಿಲ್ಲ. ಜನ್ಮಭೂಮಿಯಲ್ಲಿ ಈಗಾಗಲೇ ಕುವೆಂಪು ಗೌರವಾರ್ಥವಾಗಿ ಅಂಗನವಾಡಿಯೊಂದು ತೆರೆದು, ಮುಚ್ಚಿದ್ದು ಕೇವಲ ಹಿಂದಿನ ಕಥೆ. ಸ್ಮಾರಕವಾಗಿ ಅಲ್ಲೊಂದು ಸಣ್ಣ ಯೋಜನೆ ರೂಪಿಸಿ, ಬೃಹತ್ ಯೋಜನೆಯ ಕಾಮಗಾರಿಯು ಹಲವಾರು ಜನರಿಗೆ ಉಪಯೋಗವಾಗುವ ಸ್ಥಳದಲ್ಲಿ ಮಾಡಿ ಆ ಸಮಿತಿಯವರೇ ಹರಂದೂರು ಮಂಡಲ ಪಂಚಾಯಿತಿಯ ಉಸ್ತುವಾರಿಯಲ್ಲಿ ನಡೆಸಲಿ.

ತಾ. 27.8.89ರಂದು ಗಡಿಕಲ್ಲಿನಲ್ಲಿ ನಡೆದ ಸಮಾರಂಭದಲ್ಲಿ ಇಲ್ಲಿನ ಯುವಕ ಸಂಘದವರು ಈ ಬಗ್ಗೆ ಮಂಜುನಾಥ್‌ರೊಡನೆ ಚರ್ಚಿಸಿದಾಗ ಈ ಕುರಿತು ಆಲೋಚಿಸಿ, ವಿಚಾರ ವಿನಿಮಯ ನಡೆಸಿ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ಸಹ ನೀಡಿರುವುದರಿಂದ ಬಹುಶಃ ಸರಿಯಾದ ವ್ಯವಸ್ಥೆ ರೂಪುಗೊಳ್ಳಬಹುದೆಂಬ ಆಶಾಭಾವವಿದೆ.

ಶಿವಮೊಗ್ಗ ಜಿ. ಪ. ದವರು ಸುಮಾರು 5 ಲಕ್ಷ ರೂ. ವೆಚ್ಚದ ಕಾರ್ಯಕ್ರಮವನ್ನು ಕುವೆಂಪು ಹೆಸರಲ್ಲಿ ಕೈಗೆತ್ತಿಕೊಂಡು, ಕವಿಶೈಲದಲ್ಲಿ ವೆಚ್ಚ ಮಾಡಿದಲ್ಲಿ ಅದು ನಿರುಪಯುಕ್ತವಾಗುವುದೆಂಬುದನ್ನರಿತು, ಹತ್ತಿರದ ಜನಸಾಂದ್ರತೆಯಿರುವ ಬೆಕ್ಕನೂರಿನಲ್ಲಿ ಕಟ್ಟಡ ಕಾರ್ಯ ಪ್ರಾರಂಭವಾಗಿದೆ. ಈ ಮೊದಲು ಸ್ಥಳೀಯರ ಅಭಿಪ್ರಾಯ ಪಡೆದಿದ್ದರಿಂದ ಉತ್ತಮ ತೀರ್ಮಾನ ಬಂದಿದೆ.

ಈ ವಿಚಾರದಲ್ಲಿ ರಾಜಕೀಯ ಬಣ್ಣ, ವ್ಯಕ್ತಿ ಪ್ರತಿಷ್ಠೆ, ಹೊಗಳಿಕೆಯ ಮಾತುಗಳು ಸೂಕ್ತ[illegible] ಜನ ಸಂಪರ್ಕ ನಡೆಸಿ ಮೇಲಿನ [illegible]ಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸಮುದಾಯ ಭವನ ಮತ್ತು ಗ್ರಂಥಾಲಯವನ್ನು ಗ್ರಾಮದ ಕೇಂದ್ರ ಸ್ಥಾನವೂ, ಕುವೆಂಪುರವರ ತಾಯಿ-ತಂದೆಯರ ಊರುಗಳ ನಡುವಿನ ಸ್ಥಳವೂ, ಜನಸಾಂದ್ರತೆಯುಳ್ಳದ್ದೂ ಆದ ಗಡೀಕಲ್ಲಿನಲ್ಲಿ ಮಾಡುವುದು ಅರ್ಥಪೂರ್ಣ ಮತ್ತು ಬಹು ಉಪಯುಕ್ತ.

ಜಿ. ಪ. ಅಧ್ಯಕ್ಷರು ದುಡುಕದೆ ವಿಚಾರ ಸಂಗ್ರಹಿಸಿ ಕಾರ್ಯ ನಿರ್ವಹಿಸುತ್ತಾರೆ ಎಂದು ಆಶಿಸುತ್ತೇನೆ.

—ಹೊಕ್ಕನೆ ರವಿಕಾಂತ್,
ಹಿರೀಕೊಡಿಗೆ

'ಜೇಸೀಸ್'ಗೆ ಸಮಾಜ ಸೇವೆಯ ಸೋಗಿಲ್ಲ

ಮಾನ್ಯರೆ,

ನಿಮ್ಮ 27.8.89ರ ಸಂಚಿಕೆಯಲ್ಲಿ "ವನ ಮಹೋತ್ಸವವೋ, ರಾಜಕೀಯ [illegible]" ಲೇಖನದಲ್ಲಿ ಜೇಸೀಸ್ ಬಗ್ಗೆ "ಸಮಾಜ ಸೇವೆಯ ಸೋಗು ಹಾಕುವ ಜೇಸೀಸ್" ಎಂಬುದಾಗಿ ಬರೆದಿದ್ದಾರೆ.

(ಜೇಸೀಸ್ ಈಗ ಜ್ಯೂನಿಯರ್ ಛೇಂಬರ್ಸ್ ಎಂದು ಬದಲಾಗಿದೆ) ಹಮ್ಮಿಕೊಳ್ಳುವ ಹಲವಾರು ಕಾರ್ಯಕ್ರಮಗಳಲ್ಲಿ ಸಮಾಜ ಸೇವೆಯೂ ಒಂದು ಅಂಗವಾಗಿದ್ದರೂ ಸಹ ಜೇಸೀಸ್‌ನ ಮೂಲ ಉದ್ದೇಶ ವ್ಯಕ್ತಿ ವಿಕಸನವೇ ಆಗಿದೆ. ವಿಕಸಿತ ವ್ಯಕ್ತಿಗಳಿಂದ ಸಮಾಜದ ಉನ್ನತಿ ತಾನೇ ತಾನಾಗಿ ಸಾಧ್ಯವಾಗುತ್ತದೆಂಬುದು ಜೇಸೀಸ್ ವಿಚಾರ. ಅದುದರಿಂದ 18 ರಿಂದ 40 ವರ್ಷದ ಒಳಗಿನ ವ್ಯಕ್ತಿಗಳಿಗೆ ಮಾತ್ರ ಇಲ್ಲಿ ಸದಸ್ಯತ್ವ.

ನನಗೆ ತಿಳಿದ ಮಟ್ಟಿಗೆ ನಮ್ಮ ಮಾತೃ ಜೇಸಿಯಾದ ಶೃಂಗೇರಿ ಜೇಸೀಸ್ ಆಗಲಿ, ಬಾಳೆಹೊನ್ನೂರು, ಕೊಪ್ಪ ಅಥವಾ ನಮ್ಮ ಬಿಳಾಲ್ ಕೊಪ್ಪ ಮೇರುತಿ ಜೇಸೀಸ್ ಆಗಲಿ, ತಮ್ಮ ಕಾರ್ಯಕ್ರಮಗಳಲ್ಲಿ ಸಮಾಜ ಸೇವೆಯ ಸೋಗನ್ನು ಹಾಕಿ ಇಷ್ಟರ ಮಟ್ಟಿಗೆ ತಮ್ಮ ನೈತಿಕ ಮಟ್ಟದಲ್ಲಿ ಕುಸಿದಿಲ್ಲ ಎಂದು ಭಾವಿಸಿದ್ದೇನೆ.

—ಎಸ್. ಎಲ್. ನಾಗಭೂಷಣ್,
ಬಿಳಾಲ್‌ಕೊಪ್ಪ ಮೇರುತಿ ಜೇಸೀಸ್.

ಭಾರತ ಬಂದ್

(2ನೇ ಪುಟದಿಂದ)

ಇತ್ತ, ಇದನ್ನೆಲ್ಲ ಬೆಳಕಿಗೆ ತಂದು ಅವುಗಳ ಸುಧಾರಣೆಗೆ ಒತ್ತಾಯಿಸುವಂಥ ಜನಾಭಿಪ್ರಾಯ ಮೂಡಿಸುವ ಪತ್ರಿಕಾ ಮಾಧ್ಯಮದ ಕತ್ತು ಹಿಸುಕುವ ಯತ್ನ ನೇರ ಪ್ರಯತ್ನವಾಗಿ ತಂದ ಮಸೂದೆ ಬಿದ್ದು ಹೋದ ನಂತರ ಈಗ ಪತ್ರಿಕೆಗಳ ಮೂಲ ವಸ್ತುವಾದ ಮುದ್ರಣ ಕಾಗದವನ್ನೇ ಅವು ಕೊಳ್ಳಲಾರದಂತೆ ಅಗಾಧ ಪ್ರಮಾಣದಲ್ಲಿ ಬೆಲೆ ಏರಿಸಲಾಗಿದೆ. ಮುದ್ರಣ ಕಾಗದದ ಕೋಟಾದ ಮುಕ್ಕಾಲು ಪಾಲೆಲ್ಲ ಬೋಗಸ್ 'ಪತ್ರಿಕೆ'ಗಳಿಗೇ.

ಇನ್ನೊಂದೆಡೆ ಜನ ಸಾಮಾನ್ಯರ ಬೇಡಿಕೆಗಳು, ಆಶೋತ್ತರಗಳನ್ನು ಈಡೇರಿಸುವತ್ತ ಶ್ರಮಿಸುವ ಬದಲು ಬೇಡಿಕೆಗಾಗಿ ಒತ್ತಾಯಿಸುವ ವಿವಿಧ ಜನ ವರ್ಗಗಳನ್ನು ಹತ್ತಿಕ್ಕಲು ಹಿಂದಕ್ಕಿಂತ ಒಂದು ಉಗ್ರವಾದ ಕರಾಳ ಶಾಸನಗಳು, ನೆರೆಯ ದೇಶದ ಜೊತೆ ದೂರದೃಷ್ಟಿ-ನಿರ್ದೇಶನರಹಿತವಾದ 'ಹಿರಿಯಣ್ಣನ' ನಡವಳಿಕೆಗಳು— ಹೀಗೆ ಯಾವ ರಂಗದಲ್ಲಿ ನೋಡಿದರೂ ದೇಶಕ್ಕೆ ಹೆಮ್ಮೆಯನ್ನಾಗಲಿ ನೆಮ್ಮದಿಯನ್ನಾಗಲಿ ತರಲಾಗದ ವೈಫಲ್ಯಗಳು.

ಇಂಥ ಸರ್ಕಾರವೊಂದು ಇದೆ ಅನ್ನಿಸಿಕೊಂಡು ಇಲ್ಲವಾಗಿರುವುದಕ್ಕಿಂತ ಅದು ಕಳಗಿಳಿಯುವುದೇ ಲೇಸು. ಕರ್ನಾಟಕದ ಹೆಗಡೆ ಸರ್ಕಾರ ಹೀಗೇ ದಿವಾಳಿಯೆದ್ದಾಗ, ನೆಪಕ್ಕೆ ಅದನ್ನು ಕೇಂದ್ರ ಸರ್ಕಾರ ಮೋಸದಿಂದ ಕೆಡವಿತಾದರೂ, ಅದು ಜನ ಬೆಂಬಲ ಕಳೆದುಕೊಂಡಿತ್ತಾದ್ದರಿಂದಲೇ ಜನ ಅದರ ಪರವಾಗಿ ಮೇಲೇಳಲಿಲ್ಲ.

ಹೀಗಿರುವಾಗ ಭ್ರಷ್ಟತೆ, ದುರಾಡಳಿತದ ಪರಾಕಾಷ್ಠೆ ಮುಟ್ಟಿ, [illegible] ದಿವಾಳಿ ಎಬ್ಬಿಸುತ್ತಿರುವ ಸರ್ಕಾರವೊಂದರ ರಾಜೀನಾಮೆಗಾಗಿ ಈ ದೇಶದ ಜನತೆ ಒತ್ತಾಯಿಸುವುದರಲ್ಲಿ ಖಂಡಿತ ತಪ್ಪು ಇಲ್ಲ.

—ಶಿರಿಮನೆ ನಾಗರಾಜ್.

ನ. ರಾ. ಪುರದಲ್ಲಿ ಸಾಹಿತ್ಯ ಪರಿಷತ್ ವತಿಯಿಂದ ವಸಂತ ಸಾಹಿತ್ಯೋತ್ಸವ ಆಚರಣೆ

ನ. ರಾ. ಪುರ : ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಲ್ಲಿನ ಪಿಯು ಕಾಲೇಜಿನಲ್ಲಿ ವಸಂತ ಸಾಹಿತ್ಯೋತ್ಸವವನ್ನು ಆ 29ರಂದು ಆಚರಿಸಲಾಯಿತು.

ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಡಾ॥ ಸಾ. ಶಿ. ಮರುಳಯ್ಯನವರು 'ಕನ್ನಡದಲ್ಲಿ ಸ್ವಾರಸ್ಯ' ಎಂಬ ವಿಷಯವಾಗಿ ಪ್ರಸಿದ್ಧ ಕವಿಗಳ ಕಾವ್ಯಗಳಿಂದ ಉದಾಹರಿಸುತ್ತ ಶ್ರೋತೃಗಳ ಮನ ಮುಟ್ಟುವಂತೆ ಉಪನ್ಯಾಸ ಮಾಡಿದರು. ವಿದ್ಯಾರ್ಥಿಗಳಿಂದ [illegible] ಸೆಗೆ (ಜನಪದ ಸಾಹಿತ್ಯದಲ್ಲೂ [illegible] ವಾಗಿರುವ) ಮನ ಮುಟ್ಟುವಂತೆ [illegible] ದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ [illegible] ಸದಸ್ಯ [illegible] ಚಂದ್ರಶೇಖರ್ [illegible] [illegible] ಜನ್ಮಸ್ಥಳದ ಬಗ್ಗೆ [illegible] [illegible] ಹೋಗಲಾಡಿಸಿ [illegible] ತಕ್ಕೆ [illegible] [illegible] ಮಾತುಮತೆ [illegible] [illegible] ದರು, [illegible]

ಕೊಪ್ಪ ತಾ|| ಶಾಂತಿ ಸಮಿತಿ ಸಭೆ

ಕೊಪ್ಪ : ಜಿಲ್ಲಾಧಿಕಾರಿಗಳು ರಚಿಸಿರುವ ತಾ|| ಶಾಂತಿ ಸಮಿತಿ ಸಭೆ ಆ 31ರಂದು ತಹಸೀಲ್ದಾರರ ಕಛೇರಿಯಲ್ಲಿ ನಡೆಯಿತು. ತಹಸೀಲ್ದಾರ್, ಸರ್ಕಲ್ ಇನ್ಸ್‌ಪೆಕ್ಟರ್ ಅಲ್ಲದೆ, ಮಂಜುನಾಥ ಶೆಟ್ಟಿ, ಮಹಮದ್ ಸಾದಿಕ್, ಗುಣವಂತೆ ಸಿದ್ಧಯ್ಯ ಸೈಂಟ್ ಪೀಟರ್ಸ್ ಚರ್ಚಿನ ಸೋನ್ಸ್, ಎಂ.ಆರ್. ಕಣ್ಣನ್ ಭಾಗವಹಿಸಿದ್ದರು.

ಇವರುಗಳಲ್ಲದೆ ಈ ಸಮಿತಿಯಲ್ಲಿ ಬಿಡಿಬ, ಗೋವಿಂದ ಗೌಡರು, ತಾಲ್ಲೂಕಿನ ಮೂವರು ಜಿ.ಪ. ಸದಸ್ಯರು, ಆನಂದರಾಮ ಭಟ್ ಮತ್ತು ಬಿಳಾಲುಕೊಪ್ಪ ಮಂ. ಪ್ರಧಾನ ಬಿ.ಎನ್. ಭಾಸ್ಕರ್ ಸದಸ್ಯರಾಗಿದ್ದಾರೆ.

ಗಣೇಶ ಹಬ್ಬದ ಹಿನ್ನೆಲೆಯಲ್ಲಿ ನಡೆದ ಈ ಸಭೆ, ಹಬ್ಬ, ಉತ್ಸವ, ಮೆರವಣಿಗೆ (ಮುಖ್ಯವಾಗಿ ಧಾರ್ಮಿಕ) ಮುಂತಾದ ಸಂದರ್ಭಗಳಲ್ಲಿ ಹಿಂದಿನಂತೆ ಯಾವುದೇ ಸಂದರ್ಭದಲ್ಲೂ ಶಾಂತಿ ಭಂಗವಾಗದಂತೆ ನೋಡಿಕೊಳ್ಳಬೇಕೆಂದು ತಾಲ್ಲೂಕಿನ ನಾಗರಿಕರಿಗೆ ಮನವಿ ಮಾಡಿತು.

ಯಾವುದೇ ಕಾರಣಕ್ಕೆ ಜಾತಿ, ಕೋಮು ಅಥವಾ ಗುಂಪುಗಳ ಮಧ್ಯೆ ಅಹಿತಕರ ವಾತಾವರಣ ಉಂಟಾದಲ್ಲಿ ಅದನ್ನು ಈ ಸಮಿತಿಯ ಗಮನಕ್ಕೆ ತರಬೇಕೆಂದು ತಹಸೀಲ್ದಾರ್ ಜಿ. ಎಸ್. ನಾಯಕ್ ಮನವಿ ಮಾಡಿದ್ದಾರೆ.

ಅರಣ್ಯ ಕಾವಲುಗಾರರಿಗೆ ಏಕರೂಪ ವೇತನಕ್ಕೆ ಆಗ್ರಹ

ಶೃಂಗೇರಿ : ಸುಪ್ರೀಂ ಕೋರ್ಟ್ ತೀರ್ಪಿನನ್ವಯ ರಾಜ್ಯ ಸರ್ಕಾರ ನಿಗದಿಪಡಿಸಿರುವ ಏಕ ರೂಪದ ವೇತನವನ್ನೂ, ಹೆಚ್ಚುವರಿ ವೇತನದ ಬಾಕಿಯನ್ನೂ ಇಲ್ಲಿನ ನೆಡು ತೋಪು ಕೆಲಸಗಾರರಿಗೆ ಈ ತಿಂಗಳ ವೇತನದೊಂದಿಗೇ ನೀಡಬೇಕೆಂದೂ, ಇಲ್ಲದಿದ್ದಲ್ಲಿ ತೀವ್ರ ಚಳುವಳಿ ನಡೆಸುವುದಾಗಿಯೂ ಇಲ್ಲಿ ಆ. 14 ರಂದು ಎಸ್. ಆರ್. ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಅರಣ್ಯ ಕಾವಲುಗಾರರ ಸಭೆ ಜಿ. ಪ. ಕಾರ್ಯದರ್ಶಿ ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಒತ್ತಾಯಿಸಿದೆ.

ಪೋಸ್ಟ್‌ಮನ್ ಅಕಾಲ ನಿಧನ

ಕೊಪ್ಪ : ಇಲ್ಲಿನ ಅಂಚೆ ಕಛೇರಿಯಲ್ಲಿ ಪೋಸ್ಟ್‌ಮನ್ ಆಗಿದ್ದ ಅನಂತಮೂರ್ತಿಯವರು ಆ. 23 ರಂದು ಅಕಾಲ ಮೃತ್ಯುವಿಗೀಡಾದರು. ಕೊಪ್ಪ ಅಂಚೆ ನೌಕರರು ಆ. 24 ರಂದು ಸಂತಾಪ ಸೂಚಕ ಸಭೆ ನಡೆಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿದರು.

ಕೊಪ್ಪ ಕೃಷಿ ವಿಚಾರ ವಿನಿಮಯ ಕೇಂದ್ರದ ಪುನರಾರಂಭ

ಕೊಪ್ಪ : ಹಿಂದೊಮ್ಮೆ ತುಂಬಾ ಚಟುವಟಿಕೆಯಿಂದ ಕೂಡಿದ್ದು, ಕಳೆದ 2 ವರ್ಷಗಳಿಂದ ಸ್ತಬ್ಧವಾಗಿದ್ದ ಇಲ್ಲಿನ ಕೃಷಿ ವಿಚಾರ ವಿನಿಮಯ ಕೇಂದ್ರವನ್ನು ಆ. 26ರಂದು ಪುನರಾರಂಭಿಸಲಾಯಿತು. ಸಿಂಡಿಕೇಟ್ ಬ್ಯಾಂಕಿನ ಆಶ್ರಯದ ಈ ಸಂಸ್ಥೆಯ ಪುನರಾರಂಭಕ್ಕೆ ಕೊಪ್ಪ ಶಾಖಾ ಮ್ಯಾನೇಜರ್ ಬಿ. ಆರ್. ಪೂಜಾರಿ ಮತ್ತು ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಶ್ರೀಕಾಂತ್ ಶೆಣೈ ಇವರುಗಳ ಮುಂದಡಿ ಕಾರಣವಾಯಿತು.

ಪ್ರಸಕ್ತ ಸಾಲಿಗೆ ಅಧ್ಯಕ್ಷರಾಗಿ ನಿಲುವಾಗಿಲಿನ ಅಚ್ಯುತ ಸುಬ್ಬರಾವ್ ಸ್ವಾದಿ, ಕಾರ್ಯದರ್ಶಿಯಾಗಿ ಕೊಪ್ಪ ಹಿಂದಿಗೋಡಿನ ಬಿ. ಎಸ್. ಶ್ರೀನಿವಾಸ್ ಮತ್ತು ಖಜಾಂಚಿಯಾಗಿ ಕೊಪ್ಪದ ಬಿ. ಎ. ರಾಧಾಕೃಷ್ಣ ಆಯ್ಕೆಯಾದರು.

ಈ ಸಂಸ್ಥೆಯ ಹೆಸರೇ ಸೂಚಿಸುವಂತೆ ಇದೊಂದು ಕೃಷಿಕರ ವಿಚಾರ ವಿನಿಮಯ ವೇದಿಕೆ. ವಿವಿಧ ಕಡೆಗಳ ಕೃಷಿಕರ ಅನುಭವಗಳ ವಿನಿಮಯ, ಪ್ರಗತಿಪರ ರೈತರ ಕೃಷಿ ಕ್ಷೇತ್ರಗಳಿಗೆ ಮತ್ತು ಸಂಶೋಧನಾ ಕೇಂದ್ರಗಳಿಗೆ ಭೇಟಿ ಹಾಗೂ ವಿವಿಧ ಇಲಾಖೆಗಳ ಮುಖಾಂತರ ದೊರೆಯುವ ಸೌಲಭ್ಯಗಳ ಪರಿಚಯ–ಇವು ಇದರ ಮುಖ್ಯ ಚಟುವಟಿಕೆಗಳು.

ಕೊಪ್ಪದ ಸುತ್ತಮುತ್ತಲ ಗ್ರಾಮಗಳ ಎಲ್ಲಾ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗಿ ಈ ಕೇಂದ್ರದ ಚಟುವಟಿಕೆಗಳ ಪ್ರಯೋಜನ ಪಡೆದುಕೊಳ್ಳಬೇಕೆಂದು ಕಾರ್ಯದರ್ಶಿಯವರು ಕೋರಿದ್ದಾರೆ.

ಶೃಂಗೇರಿತಾಲ್ಲೂಕಿನಲ್ಲಿ ಕೇಂದ್ರಸರ್ಕಾರದಿಂದ ಪುರಸ್ಕೃತ 40 ಅಂಗನವಾಡಿಗಳ ಆರಂಭ

ಶೃಂಗೇರಿ : ಕೇಂದ್ರ ಸರ್ಕಾರದಿಂದ ಪುರಸ್ಕೃತವಾದ ಈ ತಾಲ್ಲೂಕಿನ ಸಮಗ್ರ ಬಾಲ ವಿಕಾಸ ಯೋಜನೆಯ ಉದ್ಘಾಟನೆಯನ್ನು ಆ. 21 ರಂದು ಇಲ್ಲಿ ಜಿ. ಪ. ಅಧ್ಯಕ್ಷ ಎಸ್. ವಿ. ಮಂಜುನಾಥ್ ಅಧ್ಯಕ್ಷತೆಯಲ್ಲಿ ಸಂಸತ್ ಸದಸ್ಯೆ ಡಿ. ಕೆ. ತಾರಾದೇವಿ ಉದ್ಘಾಟಿಸಿದರು. ಗೋವಿಂದ ಗೌಡರು, ಕೆ. ವಿ. ರಾಮಪ್ಪಯ್ಯ ಮುಖ್ಯ ಅತಿಥಿಗಳಾಗಿದ್ದರು ಈ ಯೋಜನೆಯಡಿ ತಾ||ಗೆ 40 ಅಂಗನವಾಡಿಗಳು ಮಂಜೂರಾಗಿವೆ.

ಮಧ್ಯಾಹ್ನದ ನಂತರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಏರ್ಪಡಿಸಿದ್ದ ತಾ|| ಮಟ್ಟದ ಮಹಿಳಾ ಮಂಡಳಿಗಳ ಅಧ್ಯಕ್ಷೆಯರು–ಕಾರ್ಯದರ್ಶಿಗಳ ತರಬೇತಿ ಶಿಬಿರವನ್ನು ಎಸ್. ವಿ. ಮಂಜುನಾಥ್ ಅಧ್ಯಕ್ಷತೆಯಲ್ಲಿ ರಾಮಪ್ಪಯ್ಯ ಉದ್ಘಾಟಿಸಿದರು. ಜಿ. ಪ. ಸಾಮಾಜಿಕ ನ್ಯಾಯ ಸ್ಥಾಯೀ ಸಮಿತಿ ಅಧ್ಯಕ್ಷೆ ಕುಸುಮ ಮುಖ್ಯ ಅತಿಥಿಯಾಗಿದ್ದರು.

ಆ. 22ರ ಮಧ್ಯಾಹ್ನದವರೆಗೂ ನಡೆದ ಈ ಶಿಬಿರದಲ್ಲಿ ಮಹಿಳಾ ಕಾರ್ಯಕರ್ತೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

'ಬಂದ್ ವಿಫಲಗೊಳಿಸಿದ್ದಕ್ಕೆ' ಯುವ ಕಾಂಗ್ರೆ ಕೃತಜ್ಞತೆ

ಕೊಪ್ಪ: ವಿರೋಧ ಪಕ್ಷಗಳು ಕರೆ ಕೊಟ್ಟಿದ್ದ ಭಾರತ ಬಂದ್ ವಿಫಲಗೊಳಿಸಿದ ಬಗ್ಗೆ ಜನತೆಗೆ ತಾ|| ಯುವ ಕಾಂಗ್ರೆ ಅಧ್ಯಕ್ಷ ಜಿ ಎಸ್. ನಾಗೇಶ್ ಕೃತಜ್ಞತೆ ಸಲ್ಲಿಸಿದ್ದಾರೆ.

ಸೆ. 8ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಸೇವಾ ದಳದ ಛೇರ್ಮನ್ ಎಚ್. ಆರ್. ಗುರುನಾಥ ಗೌಡ, ಜಿಲ್ಲಾ ಮುಖ್ಯಾಧಿಕಾರಿ ಮುಹಮದ್ ನವಾಬ್ ಮತ್ತು ಸಂಘಟನಾಧಿಕಾರಿ ಜಿ.ಎಸ್. ಆನಂದ್ ಕೊಪ್ಪ ಪ್ರವಾಸಿ ಮಂದಿರದಲ್ಲಿ ಸೇವಾ ದಳದ ಕಾರ್ಯಕರ್ತರನ್ನೂ ಭೇಟಿ ಮಾಡುವರೆಂದೂ ತಿಳಿಸಿದ್ದಾರೆ.

ಕೊಪ್ಪದಲ್ಲಿ ಸೆ. 10 ರಂದು ಶೃಂಗೇರಿ ಕ್ಷೇತ್ರ ಮಟ್ಟದ ಸಿಪಿಐ ಸಮಾವೇಶ

ಕೊಪ್ಪ : ಕೋಮುವಾದ ಮತ್ತು ಜಾತೀವಾದಿಗಳ ಹಾವಳಿಯಿಂದ ದೇಶದ ಐಕ್ಯತೆಗೆ ಭಂಗ ಉಂಟಾಗುತ್ತಿರುವ ಬಗ್ಗೆ ಜನತೆಯ ಗಮನ ಸೆಳೆಯಲು ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯ ಬದಲಿಗೆ "ಕೋಮು ವಾದ ವಿರೋಧಿ ದಿನಾಚರಣೆ"ಯನ್ನು ಭಾರತ ಕಮ್ಯುನಿಸ್ಟ್ ಪಕ್ಷ ಆಚರಿಸಿತು.

ನಂತರ ನಡೆದ ಪಕ್ಷದ ಸಭೆಯಲ್ಲಿ, ಶೃಂಗೇರಿ ಕ್ಷೇತ್ರ ಮಟ್ಟದಲ್ಲಿ ಪಕ್ಷದ ರಾಜಕೀಯ ಸಮಾವೇಶವನ್ನು ಸೆ. 10 ರಂದು ಕೊಪ್ಪದಲ್ಲಿ ನಡೆಸಲು ತೀರ್ಮಾನಿಸಲಾಯಿತು.

ಪೇಟೆ ಧಾರಣೆ

ಅಡಿಕೆ

ಶಿವಮೊಗ್ಗ : 1–9–1989
ಸರಕು : 3200–3495
ಬೆಟ್ಟೆ : 2200–2669
ಗೊರಬಲು : 1200–1700
ಸಾಗರ : 1.9 1989
ಇಡಿ : 1962–2239
ಚಾಲಿ : 1940–2543
ಆಪಿ : 3239–3559
ಸಿಪ್ಪೆ ಗೋಟು : 1109–1382

ಕಾಳು ಮೆಣಸು

ರೂ. 4402 ರಿಂದ 4549

ಕೊಪ್ಪ ಆಯುರ್ವೇದ ಕಾಲೇಜಿಗೆ ಉತ್ತಮ ಫಲಿತಾಂಶ

ಕೊಪ್ಪ: ಕಳೆದ ಜುಲೈಯಲ್ಲಿ ಮೈಸೂರು ವಿಶ್ವ ವಿದ್ಯಾಲಯ ನಡೆಸಿದ ಬಿ.ಎ.ಎಂ.ಎಸ್. ಪರೀಕ್ಷೆಯಲ್ಲಿ ಕೊಪ್ಪದ ಆಯುರ್ವೇದ ಕಾಲೇಜಿಗೆ ಉತ್ತಮ ಫಲಿತಾಂಶ ಬಂದಿದೆ. ಪ್ರಥಮ ಬಿ.ಎ ಎಂ.ಎಸ್. ಪರೀಕ್ಷೆಗೆ ಹಾಜರಾಗಿದ್ದ 19 ಮಂದಿಯಲ್ಲಿ 16 ಮಂದಿ ಪ್ರಥಮ ದರ್ಜೆಯಲ್ಲೂ 3 ಮಂದಿ ದ್ವಿತೀಯ ದರ್ಜೆಯಲ್ಲೂ ಉತ್ತೀರ್ಣರಾಗಿದ್ದಾರೆ. (ನೂರಕ್ಕೆ ನೂರು)

ದ್ವಿತೀಯ ಬಿ.ಎ.ಎಂ.ಎಸ್. ಪರೀಕ್ಷೆಯಲ್ಲಿ 74% ಫಲಿತಾಂಶ ಬಂದಿದ್ದು 5 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲೂ ... ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲೂ ತೇರ್ಗಡೆಯಾಗಿದ್ದಾರೆ

ವಸಂತ ಸಾಹಿತ್ಯೋತ್ಸವ

(3ನೇ ಪುಟದಿಂದ)

ಆಗಬೇಕಾಗಿದೆ ಎಂದು ಸೂಚಿಸಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವೈಕ್ಯತೆ ಮೂಡಿಸಲು, ಮೊದಲಿಗೆ ದ್ರಾವಿಡ ಭಾಷೆಗಳ ಐಕ್ಯತೆಯ ಅಗ್ಯತವಿದೆ ಎಂಬ ಅಭಿಪ್ರಾಯ ಮಂಡಿಸಿದರು.

ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲ್ ಎ. ಕೆ. ಹಾಲೇಶಪ್ಪ ಮತ್ತು ಎಚ್. ಜಿ. ಬಾಲಕೃಷ್ಣ ಬಹುಮಾನ ವಿತರಿಸಿದರು. ಕ. ಸಾ. ಪ ತಾಲ್ಲೂಕು ಪ್ರತಿನಿಧಿ ವೀರಪ್ಪ ದೇವರು ಸಭೆಗೆ ವಿಶೇಷ ಆಹ್ವಾನಿತರ ಪರಿಚಯ ಮಾಡಿಕೊಟ್ಟರು. ಕಿರಿಯ ಕಾಲೇಜು ಪ್ರಿನ್ಸಿಪಾಲ್ ಕೆ. ನಾಗೇಂದ್ರಪ್ಪ ಉಪಸ್ಥಿತರಿದ್ದರು. ಉಪನ್ಯಾಸಕರಾದ ನವಿಲೂರು ಪ್ರಕಾಶ್ ಕಾರ್ಯಕ್ರಮ ನಿರ್ದೇಶಿಸಿದರು. ಬಿ. ಆರ್. ಶ್ರೀಕಂತಯ್ಯ ವಂದಿಸಿದರು.

ಕಳೆದು ಹೋಗಿದೆ

8–6–89ರಂದು ಶೃಂಗೇರಿ – ಆಗುಂಬೆ ರಸ್ತೆಯ ಕೈಮನೆಯಲ್ಲಿ ಅಪಘಾತಕ್ಕೀಡಾದ ಶಂಕರ್ ಮಿನಿ ಬಸ್‌ನಲ್ಲಿ ನನ್ನ ಜಮೀನಿಗೆ ಸಂಬಂಧಿಸಿದ ಕೆಲವು ದಾಖಲೆಗಳು, ಬೇಗಾರು ಕರ್ನಾಟಕ ಬ್ಯಾಂಕಿನ ಪಾಸ್ ಪುಸ್ತಕ, ಎ. ಎಸ್. ಸಿ. ನಂ 21ಬಿ/ 249942 ಹಾಗೂ 2950 ರೂ ಗಳಷ್ಟು ಹಣ ಕಳೆದು ಹೋಗಿದೆ. ಇದರ ಪೈಕಿ ಯಾವುದಾದರೂ ವಸ್ತುವಾಗಲಿ ಹಣವಾಗಲಿ ಸಿಕ್ಕಿದವರು ತಿಳಿಸಿದರೆ ಅಥವಾ ತಂದು ತಲ್ಪಿಸಿದಲ್ಲಿ ಸೂಕ್ತ ಬಹುಮಾನವುಂಟು. ಟಿ ವಿ. ಉಮೇಶ

ಬೋಳೂರು, ಬೇಗಾರು ಅಂಚೆ, ಶೃಂಗೇರಿ ತಾ||

ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು

ಅಕ್ಷತಾ ಆಟೋ ಲಿಂಕ್ಸ್

ಯಾವುದೇ ರೀತಿಯ ವಾಹನಗಳನ್ನು ಕೊಳ್ಳ ಬಯಸುವವರು ಹಾಗೂ ತಮ್ಮಲ್ಲಿರುವ ವಾಹನಗಳನ್ನು ಮಾರ ಬಯಸುವವರು ನಮ್ಮನ್ನು ಸಂಪರ್ಕಿಸಿ.

ಹೆಚ್ಚಿನ ವಿವರಗಳಿಗೆ :

ಅಕ್ಷತಾ ಆಟೋ ಲಿಂಕ್ಸ್,
ಕೇರಾಫ್ ಅಕ್ಷತಾ ಎಲೆಕ್ಟ್ರಿಕಲ್ಸ್,
ಸಿಂಡಿಕೇಟ್ ಬ್ಯಾಂಕ್ ಎದುರು, ಕೊಪ್ಪ.

ಸಂಪಾದಕ, ಮುದ್ರಕ, ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀವಿಗೆ ಅಚ್ಚು ಕೂಟ, ಕೊಪ್ಪ